ಟೊಳ್ಳು, ಸುಳ್ಳುಗಳನ್ನು. ಇವುಗಳಿಂದ ಪಾರಾಗಲು ಆಗದೇ ಒದ್ದಾಡುತ್ತಿರುವವರನ್ನು ತಲುಪುತ್ತಾ ಇವುಗಳಿಂದ ಪಾರಾಗುವುದೆಂದರೆ ಶರಣರಾಗುವುದು ಎಂದು ಆತ ಅರುಹಬೇಕಾಗಿತ್ತು. ಹೀಗೆ 'ಶರಣ' ವರ್ಸಸ್ 'ಅಶರಣ'ವನ್ನು ಕನ್ವಿನ್ಸ್ ಮಾಡುವ ಪ್ರಕ್ರಿಯೆಯಾಗಿ ಮೂಡುವ ಆತನ ವಚನಗಳಲ್ಲಿ ಬರುವ ರೂಪಕಗಳಲ್ಲಿ ಹಲವು ಬಾರಿ ಹೆಣ್ಣು ಮರುಕಳಿಸುತ್ತಾಳೆ. ಅದರಲ್ಲೂ 'ಸೂಳೆ' ಎಂಬ ಪದ ಮತ್ತೆ ಮತ್ತೆ ಅನುರಣಿಸುತ್ತಿರುತ್ತದೆ. ಒಂದು ರೀತಿಯಲ್ಲಿ ಅದು ಹೆಣ್ಣಿನ ಸಾಮಾಜಿಕ ಸ್ಥಿತಿಯ ವಾಸ್ತವದ ದಾಖಲಾತಿಯಾಗಿಯೂ ಕಾಣಿಸುತ್ತದೆ. ಅವಳನ್ನು ಆ ಸ್ಥಿತಿಯಲ್ಲಿ ಇಟ್ಟಿರುವ ಸಮಾಜ ನಮ್ಮ ಟೀಕೆಯ ಗುರಿಯಾಗಬೇಕಿತ್ತು. ಆದರೆ ಅವಳೇ ಗುರಿಯಾಗುವುದು ಇಂದಿಗೂ ಮುಂದುವರಿದಿರುವ ವಿಡಂಬನೆ. ಇದು ಬಸವನಲ್ಲೂ ಕಾಣುತ್ತದೆ. ಹೆಣ್ಣನ್ನು ನಿಯಂತ್ರಿಸುವ ಅಲಿಖಿತ ಸಂವಿಧಾನವು ಹೆಣ್ಣನ್ನು ಹೇಗೆ ವ್ಯಾಖ್ಯಾನಿಸಿದೆಯೋ ಅದೇ ರೀತಿಯಲ್ಲಿ ನೇರವಾಗಿ ಬಸವಣ್ಣನ ವಚನದಲ್ಲಿ ಪ್ರವೇಶ ಪಡೆಯುತ್ತದೆ. ಈ ಅಲಿಖಿತ ಸಂವಿಧಾನದ ಹೆಣ್ಣು ನಿರೂಪಣೆಗಳು ಎಷ್ಟು ಆಳವಾಗಿ ಬೇರೂರಿವೆಯೆಂದರೆ, ವ್ಯವಸ್ಥೆಯ ವಿರುದ್ಧದ ಬಂಡಾಯಗಾರರಿಗೂ ಈ ಅವ್ಯವಸ್ಥೆ ಕಣ್ಣಿಗೆ ಕಾಣಿಸದಷ್ಟು.

ಬಸವಣ್ಣನ ವಚನಗಳಲ್ಲಿ ಹೆಣ್ಣು ಸಂತ್ರಸ್ತೆಯಾಗಿ ಮುನ್ನೆಲೆಗೆ ಬರುವುದಿಲ್ಲ. ಬದಲಿಗೆ, ಬಸವಣ್ಣನು ಈ ಸಮಾಜದಲ್ಲಿ ಏನನ್ನು ಒಪ್ಪುವುದಿಲ್ಲವೋ ಅದನ್ನು ನಿಂದಿಸಲು ಹೆಣ್ಣನ್ನು ಹೋಲಿಕೆಯಾಗಿ ಬಳಸುತ್ತಾನೆ. ಶರಣರಾಗುವುದೆಂದರೇನು? ಎಂಬುವುದನ್ನು ವಿವರಿಸುವಾಗ ಅದು ಕಲುಷಿತ ವ್ಯವಸ್ಥೆಯಿಂದ ಪರಿಶುದ್ಧ ವ್ಯವಸ್ಥೆಯೆಡೆಗೆ ಚಲಿಸುವುದು ಎಂಬುದನ್ನು ಆತನಿಗೆ ಹೇಳಬೇಕಾಗಿದೆ. ಈ ಪರಿಶುದ್ಧತೆಯನ್ನು ಆತ ಅರ್ಥ ಮಾಡಿಕೊಳ್ಳುವುದು ಹೆಣ್ಣಿನ ಪಾತಿವ್ರತ್ಯದ ಮೂಲಕ. ಶರಣರಾದವರೆಲ್ಲರೂ ಶಿವನಿಗೆ 'ಸತಿ' ಆಗಿರುತ್ತಾರೆ. ಸತಿಯಾದವಳು ತನ್ನ ಪತಿಗೆ ನಿಷ್ಠಳಾಗಿ ಅವನೊಬ್ಬನೇ ಗಂಡ ಎಂದು ನಂಬಬೇಕು ಎಂಬುದು ಒಂದು ನಂಬಿಕೆ. (ಗಂಡಿಗೆ ಮಾತ್ರ ವಿನಾಯಿತಿ!) ಹಾಗೆಯೇ ಶರಣರಾದವರೆಲ್ಲರೂ ಶಿವನೊಬ್ಬನೇ ಪತಿ ಎಂದು ಭಾವಿಸಬೇಕು. ಯಾವುದೇ ಅನ್ಯದೈವವನ್ನು ಪೂಜಿಸುವುದು ಅನೈತಿಕ ಎಂದು ಆತನಂತೆ ಹಲವು ಶರಣರು ಪ್ರತಿಪಾದಿಸುತ್ತಾರೆ. ವಚನಗಳಲ್ಲಿ ಲಕ್ಷ್ಮಿ, ವಿಷ್ಣು ಮೊದಲಾದವರನ್ನು ಪೂಜಿಸುವುದನ್ನೂ ವಿರೋಧಿಸಲಾಗಿದೆ. ಹೀಗೆ ಏಕನಿಷ್ಠೆಯನ್ನು ಹೊಂದದವರೆಲ್ಲರನ್ನೂ 'ಹಾದರಗಿತ್ತಿ'ಯರು ಎಂದು ದೂಷಿಸಲಾಗುತ್ತದೆ. ಶರಣರಲ್ಲಿ ಪರಿಶುದ್ಧತೆಯನ್ನು ಒತ್ತಾಯಿಸುವ ಸಂದರ್ಭದಲ್ಲಿ ಬಸವಣ್ಣನು ಬಳಸುವ ಕೆಲವು ಪರಿಕಲ್ಪನೆಗಳು ಹೇಗಿವೆ ನೋಡಿ:

**1**

**ನಿನ್ನ ಮಡದಿಗಿರಲೆಂದಡೆ, ಮಡದಿಯ ಕೃತಕ ಬೇರೆ / ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿ ಗಡಕದೆ ಮಾಣ್ಬಳೆ? / ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ / ಕೂಡಲ ಸಂಗನ ಶರಣರಿಗೆ ಒಡನೆ ಸವೆಸುವುದು**

**2**

**ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ / ಕಂಗಳಲೊಬ್ಬನ ಕರೆವಳು, ಮನದಲೊಬ್ಬನ ನೆರೆವಳು, / ಕೂಡಲ ಸಂಗಮ ದೇವ ಕೇಳಯ್ಯ, / ಮಾನಿಸಗಳ್ಳಿಯ ನಂಬದಿರಯ್ಯಾ**

ಈ ಎಲ್ಲ ರೂಪಕಗಳ ಗುರಿ 'ಶಿವನಲ್ಲದುದೆಲ್ಲ ವರ್ಜ್ಯ' ಎಂದು ಹೇಳುವುದೇ ಆಗಿರಬಹುದು. ಆದರೆ ಹೆಣ್ಣಿನೆಡೆಗೆ ಸಮಾಜದಲ್ಲಿ ಅಂತರ್ಗತವಾಗಿರುವ ತಿರಸ್ಕಾರ ಭಾವವನ್ನು ಹಾಗೇ ಮುಂದಕ್ಕೆ ದಾಟಿಸುತ್ತಿರುವುದು ಸ್ಪಷ್ಟವಾಗಿದೆ. 'ಭಕ್ತಿಯೆಡೆಗೆ ಬನ್ನಿ' ಎಂದು ಕರೆಯಲು ಇಂತಹ ಹೋಲಿಕೆಗಳೇ ಏಕೆ ಬಳಕೆಯಾಗುತ್ತವೆ? ಬಸವಣ್ಣನ ಇನ್ನೊಂದು ಪ್ರಸಿದ್ಧ ವಚನದಲ್ಲೂ ಇದನ್ನು ಗಮನಿಸಬಹುದು.

**ಕೂಸುಳ್ಳ ಸೂಳೆ, ಧನದಾಸೆಗೆ ಒತ್ತೆಯ ಕೊಂಡಡೆ / ಕೂಸಿಂಗಲ್ಲ, ಬೋಜಗಂಗಲ್ಲ / ಕೂಸನೊಮ್ಮೆ ಸಂತೈಸುವಳು, ಬೋಜಗನೊಮ್ಮೆ ನೆನೆವಳು / ಧನದಾಸೆ ಬಿಡದು ಕೂಡಲ ಸಂಗಮದೇವಾ**

ಭಕ್ತನ ಸಂದಿಗ್ಧ ಸ್ಥಿತಿಗೆ ರೂಪಕವಾಗಿ ಈ ವಚನ ಇದೆ. ಈ ವಚನದಲ್ಲಿ 'ಧನದಾಸೆ' ಎಂಬ ಪದದ ಬದಲಿಗೆ 'ಕೂಸುಳ್ಳ ಸೂಳೆ' ಎಂಬ ಪದಕ್ಕೆ ಹೆಚ್ಚು ಒತ್ತು ಬಿದ್ದರೆ ಆಗ ಅದು ತೆರೆದು ತೋರುವ ಲೋಕ ಬೇರೆ. ತನ್ನ ಮಗುವನ್ನು ಸಾಕುವುದಕ್ಕಾಗಿ ಆಕೆ ಸಂಪಾದಿಸಲೇ ಬೇಕು. ಬೋಜಗನನ್ನು ನಿರಾಕರಿಸುವ ಆಯ್ಕೆ ಅವಳಿಗಿದ್ದರೂ, ಉಪವಾಸ ಬೀಳುವ ಸಂಭಾವ್ಯತೆ ಅವಳನ್ನು ಸಂದಿಗ್ಧಕ್ಕೆ ದೂಡುತ್ತದೆ. ಇಲ್ಲಿ ಕೂಸು